
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಅಕ್ಟೋಬರ್ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 10 ಪ್ರಕಟಣೆ : 10-10-2023

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯಕ್ಕೆ MRPLನ CSR ಫಂಡ್ ವತಿಯಿಂದ ಸುಮಾರು ರೂ. 40 ಲಕ್ಷ ವೆಚ್ಚದ ಸೌರಮಾನ ವಿದ್ಯುತ್ ಉತ್ಪಾದನಾ ಘಟಕವನ್ನು ಸಂಪೂರ್ಣವಾಗಿ ಪ್ರಾಯೋಜಿಸಿದ್ದಾರೆ. ಇದರಿಂದ ತಿಂಗಳೊಂದರ ಸುಮಾರು ರೂ. 40,000 ವಿದ್ಯುತ್ ವೆಚ್ಚ ಉಳಿತಾಯವಾಗಲಿದೆ. MRPL ನಿರ್ದೇಶಕ ಶ್ರೀ ಬಿ. ಎಚ್. ವಿ. ಪ್ರಸಾದ್ ಮತ್ತು ಅಧಿಕಾರಿ ಶ್ರೀ ಎ. ಮನೋಜ್ ಕುಮಾರ್ ಇವರು ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಇವರಿಗೆ ಈ ಬಗ್ಗೆ ಮಂಜೂರಾತಿ ಪತ್ರವನ್ನು ನೀಡಿದರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.



ಕೊಂಗೆಟ್ಟಿರ ಪದ್ಮಾ ಮೊನ್ನಪ್ಪ ಸ್ಮರಣಾರ್ಥ ಅವರ ಪತಿ ಶ್ರೀ ಕೆ. ಎಂ. ಮೊನ್ನಪ್ಪ, ಪುತ್ರ ಶ್ರೀ ಸಂದೀಪ್ ಮೊನ್ನಪ್ಪ, ಮಗಳು ಶ್ರೀಮತಿ ಲಕ್ಷ್ಮೀ ಮೊನ್ನಪ್ಪ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 5,00,000/- (ಐದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.



ಸಾಂತೂರ್ ಶ್ರೀ ಕೃಷ್ಣ ರಾವ್ ಮತ್ತು ಶ್ರೀಮತಿ ಶಾರದಾ ಕೃಷ್ಣ ರಾವ್ ಸ್ಮರಣಾರ್ಥ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,11,001/- (ಒಂದು ಲಕ್ಷದ ಹನ್ನೊಂದು ಸಾವಿರದ ಒಂದು) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಪುತ್ರ ಡಾ. ಕಿಶೋರ್ ರಾವ್, ಶ್ರೀಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು.


ಉಂಡಾರು ಗೋವಿಂದ ರಾವ್ ಮತ್ತು ವನಜಾಕ್ಷಮ್ಮ ಸ್ಮರಣಾರ್ಥ ಅವರ ಮಕ್ಕಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.





ಮಂಗಳೂರು ನಿವಾಸಿ ಕೇದಿಗೆ ಶ್ರೀ ಅರವಿಂದ ರಾವ್ ತಮ್ಮ ಮಾತಾಪಿತರಾದ ಕೇದಿಗೆ ದಿ। ಭಾಸ್ಕರ ರಾವ್ ಮತ್ತು ದಿ। ಲಕ್ಷ್ಮೀ ಭಾಸ್ಕರ ರಾವ್ ಸ್ಮರಣಾರ್ಥ ತಮ್ಮ ಧರ್ಮಪತ್ನಿ ಶ್ರೀಮತಿ ಗಾಯತ್ರಿ ರಾವ್ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

ಮಂಗಳೂರು ನಿವಾಸಿ ಶ್ರೀ ರಾಯಿ ಶಶಿಧರ್ ರಾವ್ ಮತ್ತು ಶ್ರೀಮತಿ ರಾಯಿ ಚಂದ್ರಪ್ರಭಾ ದಂಪತಿಗಳು ದಿ। ರಾಯಿ ಶ್ಯಾಮ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 1,00,000/- (ಒಂದು ಲಕ್ಷ) ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಉಪಸ್ಥಿತರಿದ್ದರು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಕುದ್ಮಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ತಾ. 29-10-2023ನೇ ಆದಿತ್ಯವಾರ

**'ನಾಡಹಬ್ಬ'**ವನ್ನು
ವಿವಿಧ ಕಾರ್ಯಕ್ರಮಗಳೊಂದಿಗೆ
ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಹೆಚ್ಚಿನ ಮಾಹಿತಿಗಾಗಿ

| | |
|---|---|
| ಶ್ರೀ ಅನಿಲ್ ಎನ್. | 9448815172 |
| ಶ್ರೀ ಸುರೇಶ್ ಕಡಬ | 9972760673 |
| ಶ್ರೀಮತಿ ಪುಷ್ಪಾ ಶ್ರೀನಿವಾಸ್ | 9739155359 |
| ಶ್ರೀಮತಿ ಕುಸುಮಾ ನವೀನ್ ಕುಮಾರ್ | 9480760904 |

ಸೂಚನೆ : ಕಾರ್ಯಕ್ರಮದ ವಿವರ 3ನೇ ಪುಟದಲ್ಲಿ.

**ಜ್ಞಾನಶಕ್ತಿ ಮಾಸಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು - 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್
9343361618

ಸಂಪಾದಕ ಮಂಡಳಿ :
- ನಾಗರಾಜ್ ವರ್ಕಾಡಿ
- ರಘುವೀರ್ ಪೆರ್ಡೂರು
- ಟಿ. ಬಿ. ಮೋಹನ್ ರಾವ್
- ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
- ಕರುಣ್ ರಾವ್ ಬೆಳ್ಳೆ
- ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
- ಚೇತನ್ ಶರ್ಮ
- ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

7795116598 ✆ : 9343361618
e-mail :
jnanashakthisss@gmail.com









## ಕೃಷಿಋಷಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಅಮ್ಮೈ ಶ್ರೀ ಬಿ. ಕೆ. ದೇವರಾವ್ ಇವರಿಗೆ ಸಮಾಜ ಬಂಧುಗಳಿಂದ ಸನ್ಮಾನ



ಸರಕಾರದ ಯಾವುದೇ ಪ್ರಶಸ್ತಿ ಬರುವುದರಲ್ಲಿ ಶೇ. 50 ಸಾಧನೆ ಇದ್ದರೆ, ಉಳಿದ 50% ಶಿಫಾರಸ್ಸು. ಇದು ಇಂದಿನ ಪ್ರಶಸ್ತಿಗಳ ದುಸ್ಥಿತಿ. ಇದಕ್ಕೆ ತದ್ವಿರುದ್ಧವಾಗಿ ಸಾಧನೆಯ ಆಧಾರದ ಮೇಲೆಯೇ, ಯಾವುದೇ ಶಿಫಾರಸ್ಸು ಆಮಿಷಗಳಿಲ್ಲದೆ ರಾಷ್ಟ್ರಪ್ರಶಸ್ತಿ ಒಬ್ಬನಿಗೆ ಲಭಿಸುತ್ತದೆ ಎಂದಾದರೆ ಅದಕ್ಕೆ ಕಾರಣ ಪ್ರಾಮಾಣಿಕ, ಶ್ರಮಜೀವಿ, ಅಪ್ರತಿಮ ದೇಶಭಕ್ತ, ದೇಶವೇ ದೇಗುಲ ಎಂದು ಪೂಜಿಸುವ, ತನಗಾಗಿ ಎಂಬ ಶಬ್ದದ ಅರ್ಥವನ್ನೇ ಬದಲಿಸಿದವರು ನಮ್ಮ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶದ ಅನೇಕ ಕರ್ಮಯೋಗಿಗಳನ್ನು, ಎಲೆಮರೆಯ ಅಮೃತ ಫಲಗಳನ್ನು ಗುರುತಿಸಿ ರಾಷ್ಟ್ರಪ್ರಶಸ್ತಿ ನೀಡುತ್ತಿರುವುದನ್ನು ಗಮನಿಸಿದರೆ ಈ ದೇಶದಲ್ಲಿ ಇಂತಹ ಬದಲಾವಣೆಯು ಸಾಧ್ಯವೇ ಎಂಬ ಅಚ್ಚರಿಯು ಮೂಡುತ್ತದೆ.

ಇದಕ್ಕೆ ನಮ್ಮ ಸಮಾಜದ ಬಂಗಾಡಿ ಕುಟುಂಬದ ಓರ್ವ ಸದಸ್ಯರೂ ಭಾಗಿಯಾಗಿದ್ದಾರೆ ಎಂದರೆ ನಮ್ಮ ಸಮಾಜಕ್ಕೆ ಕಿರೀಟವಿಟ್ಟಂತೆ. ಅವರೇ ನಮ್ಮ ಅಮ್ಮೈ ದೇವರಾಯರು. ಸುಮಾರು 175ಕ್ಕಿಂತಲೂ ಅಧಿಕ ಭತ್ತದ ತಳಿಯನ್ನು ಸಂಗ್ರಹಿಸಿ, ಬಿತ್ತಿ ಬೆಳೆದು, ಕಾಪಿಟ್ಟ ಇವರು ಕೃಷಿ ಋಷಿಯೇ ಸರಿ. ತನಗೆ, ತಮ್ಮ ಮಕ್ಕಳಿಗೆ ಇದ್ದರೆ ಸಾಕು ಎಂದು ಭಾವಿಸುವ ಈ ಕಾಲಘಟ್ಟದಲ್ಲಿ ದೇಶದ ಆಹಾರ ಉತ್ಪಾದನೆಯ ಮೂಲಾಧಾರವಾದ ಈ ಬೀಜ ಸಂಗ್ರಹವನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ, ತನ್ನ ಆತ್ಮತೃಪ್ತಿಗಾಗಿ ಮಾಡಿದ ಕಾರ್ಯ ದೇಶದ ಏಳ್ಗೆ ಬಯಸುವವರ ಕದತಟ್ಟಿ ಬತ್ತದ 80ರ ಯುವತಾಪಸಿಗೆ, ಭತ್ತದ ತಳಿ ಸಂರಕ್ಷಕನಿಗೆ ಇಂದು ರಾಷ್ಟ್ರಪ್ರಶಸ್ತಿಯನ್ನು ತಂದುಕೊಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಭತ್ತದ ಸಾಗುವಳಿ ಎಂದರೆ ಮಾರು ದೂರ ಓಡುವವರಿದ್ದಾರೆ. ಕಾರಣ ಉದಾಸೀನವಲ್ಲ. ಬೆಳೆ ಬೆಳೆಸಲು ಆಗುವ ಶ್ರಮ ವೆಚ್ಚವನ್ನು ಗಮನಿಸಿದರೆ ಹಾಗೂ ಕೃಷಿ ಕಾರ್ಮಿಕರ ಅಭಾವ ಹವಾಮಾನ ವೈಪರೀತ್ಯದಿಂದಾಗಿ ಯಾರಿಗೂ ಬೇಡವಾದ ಕೃಷಿಯ ಸ್ಥಾನದಲ್ಲಿ ಭತ್ತದ ವ್ಯವಸಾಯ ಅವಗಣನೆಗೆ ಒಳಗಾಗಿದೆ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ನಮ್ಮ ದೇವರಾಯರು ಈಗಲೂ ಸಾಗುವಳಿ (ಭತ್ತದ ವ್ಯವಸಾಯ) ಮಾಡುತ್ತಾರೆಂದರೆ ಇದು ಒಂದು ನಿಷ್ಕಾಮಕರ್ಮವೇ ಸರಿ. ಇದು ಮಾತ್ರವಲ್ಲದೆ, ಬೆಳೆಯಲ್ಲಿ ಹೆಚ್ಚು ಇಳುವರಿ ಬರಬೇಕೆಂದರೆ ರಾಸಾಯನಿಕ ಗೊಬ್ಬರ, ಕಳೆ, ಕೀಟನಾಶಕಗಳ ಬಳಕೆ ಅನಿವಾರ್ಯ ಎಂದು ನಂಬಿರುವ ಈ ಸಮಯದಲ್ಲಿ, ಬೆಳೆದ ಬೆಳೆಯನ್ನು ತಾನೂ ಉಣ್ಣಬೇಕು, ಅದು ಆಹಾರವಾಗಿಯೇ ಉಳಿಯಬೇಕೇ ಹೊರತು ವಿಷವಾಗಬಾರದು ಎಂಬ ತತ್ವವನ್ನು ಪಾಲಿಸುವ ಶ್ರೀ ದೇವರಾಯರು ಸಾವಯವ ಪದ್ಧತಿಯಲ್ಲೇ ಬೆಳೆ ಬೆಳೆಸುತ್ತಾರೆ. ಇದನ್ನೇ ಉಂಡ ಶರೀರ 80ರ ವಯಸ್ಸಿನಲ್ಲೂ ದುಡಿಯಲು ಅವರಿಗೆ ಹುಮ್ಮಸ್ಸು ನೀಡಿದೆ. ಇವರಲ್ಲಿ ಭತ್ತ ಮಾತ್ರವಲ್ಲದೆ, ಊರಿನ (ನಾಟಿ) ಜಾತಿಯ 60 ಮಾವಿನ ತಳಿಗಳೂ, 80 ಬಗೆಯ ಹಲಸಿನ ತಳಿಗಳೂ ಇವೆ.

ತಾ. 12–09–2023ರಂದು ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಮ್ಮ ರಾಷ್ಟ್ರಪತಿಗಳಾದ **ಶ್ರೀಮತಿ ದ್ರೌಪದಿ ಮುರ್ಮು ಇವರಿಂದ 'ಉತ್ತಮ ತಳಿ ಸಂರಕ್ಷಕ ಪ್ರಶಸ್ತಿ'**ಗೆ ಭಾಜನರಾದ ನಮ್ಮ ಸಮಾಜದ ಹಿರಿಯ ಚೇತನ ಬಂಗಾಡಿಯ ಅಮ್ಮೈ ಶ್ರೀಯುತ ದೇವರಾವ್ ಇವರನ್ನು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ವತಿಯಿಂದ ತಾರೀಕು 23–09–2023ರಂದು ಅವರ ಸ್ವಗೃಹದಲ್ಲಿ ಸನ್ಮಾನಿಸಲಾಯಿತು.

ಶ್ರೀ ಬಿ. ಕೆ. ದೇವರಾವ್‌ರವರ ಬಗ್ಗೆ ಅವರ ಸಹೋದರರಾದ ಕುದ್ರೋಳಿ ಶ್ರೀ ಬಿ. ಕೆ. ಸುಬ್ಬ ರಾವ್ ಹಾಗೂ ಕುಂಚಿಲ ಶ್ರೀ ಬಿ. ಕೆ. ಗೋಪಾಲ ರಾವ್ ಇವರು ಮಾತನಾಡಿ ಸಹೋದರನ ಸಾಧನೆಯನ್ನು ಕೊಂಡಾಡಿದರು. ಪೂರ್ವಾಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್, ಶ್ರೀ ಕ್ಷೇತ್ರ ಧರ್ಮಸ್ಥಳದ ಪಾರುಪತ್ಯಗಾರರಾದ ಶ್ರೀ ಪಿ. ಲಕ್ಷ್ಮೀನಾರಾಯಣ ರಾವ್ ಇವರು ಮಾತನಾಡಿ ಭತ್ತದ ಬೆಳೆ ನಾಶವಾಗುತ್ತಿರುವ ಈ ಕಾಲಘಟ್ಟದಲ್ಲಿ ಭತ್ತದ ಬೆಳೆಯ ಕುರಿತಾಗಿಯೇ, ವಿಪ್ರ ಸಮಾಜದಲ್ಲಿ ಅತೀ ಸಣ್ಣ ಸಮುದಾಯವಾಗಿರುವ ಸ್ಥಾನಿಕ ಸಮಾಜದ ಓರ್ವ ಸದಸ್ಯ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದು ವಿಪ್ರ ಸಮುದಾಯಕ್ಕೆ ಹೆಮ್ಮೆ ತಂದಿದ್ದಾರೆ ಎಂದರು. ಸಭಾದ ಅಧ್ಯಕ್ಷರು ಮಾತನಾಡಿ ನನ್ನ ಅಧ್ಯಕ್ಷಾವಧಿಯಲ್ಲಿ ದೇವರಾಯರಿಗೆ ಪ್ರಶಸ್ತಿ ಸಿಕ್ಕಿರುವುದು ನನ್ನ ಯೋಗ ಎಂದು ಹೇಳಿ ಶುಭಾಶಯ ಹೇಳಿದರು.

ಸಭಾದ ಕಾರ್ಯದರ್ಶಿ ಶ್ರೀ ವಿಕಾಸ್ ರಾವ್ ಮಾತನಾಡಿ ಶ್ರೀ ದೇವರಾಯರು ನಮ್ಮ ಸಮಾಜದ ಇತರರಿಗೆ ಪ್ರೇರಣೆಯಾಗಬಲ್ಲ 'ಕೃಷಿ ಋಷಿ' ಎಂದರೆ ತಪ್ಪಾಗಲಾರದು... ಒಟ್ಟಾರೆಯಾಗಿ ತಮ್ಮ ಈ ಸಾಧನೆಗೆ ವಿವಿಧ ಪ್ರಶಸ್ತಿಗಳು ಲಭಿಸಿ, ನಮ್ಮ ಸಮಾಜದ ಕೀರ್ತಿಪತಾಕೆಯು ಮುಗಿಲೆತ್ತರಕ್ಕೆ ತಲುಪಲಿ ಎಂಬ ಆಶಯ ನಮ್ಮದು ಎಂದು ಆಗಮಿಸಿದ ಸಮಾಜ ಬಂಧುಗಳಿಗೆ ಧನ್ಯವಾದವನ್ನಿತ್ತರು.

ಪ್ರಸ್ತುತ ಕಾರ್ಯಕ್ರಮದ ವೇದಿಕೆಯಲ್ಲಿ ವಲಯದ ಅಧ್ಯಕ್ಷರುಗಳು, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಸ್ವಾತಿ ವಿಶ್ವಜಿತ್, ಕಾರ್ಯದರ್ಶಿ ಶ್ರೀಮತಿ ಸವಿತಾ, ನಿರ್ದೇಶಕರುಗಳು ಇದ್ದರು. ಶ್ರೀ ಬಿ. ಕೆ. ಧನಂಜಯ ರಾವ್ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಬಂಗಾಡಿ ವಲಯದ ಅಧ್ಯಕ್ಷರಾದ ಶ್ರೀ ಉಮೇಶ್ ರಾವ್ ಸ್ವಾಗತಿಸಿದರು. ಸುಮಾರು 40 ಸದಸ್ಯರುಗಳು ಭಾಗವಹಿಸಿದ್ದರು.



॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥
॥ ಶ್ರೀ ಗುರುಭ್ಯೋ ನಮಃ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಕೋಡಿಂಬಾಡಿ, ಪುತ್ತೂರು - 574 325, ದ. ಕ.**

ಮೊಬೈಲ್ : **9901247080 / 9902022410**

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

ಪ್ರಿಯ ಭಗವದ್ಭಕ್ತರೇ,

**ಸ್ವಸ್ತಿ। ಶ್ರೀ ಶೋಭಕೃತ್ ಸಂವತ್ಸರದ ಆಶ್ವೀಜ ಶುಕ್ಲ ಪ್ರತಿಪತ್ತಿನಿಂದ ದಶಮಿವರೆಗೆ ದಿನಾಂಕ 15-10-2023ರಿಂದ 24-10-2023**

### ಶರನ್ನವರಾತ್ರ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ

**ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ ಇವರ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು. ಭಕ್ತಾದಿಗಳಾದ ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –**

**ಯಂ. ನಾಗೇಶ ಶರ್ಮ** – ಅರ್ಚಕರು ಹಾಗೂ ಕಾರ್ಯದರ್ಶಿ

**ಟಿ. ಅಣ್ಣಪ್ಪಯ್ಯ ತೆಂಕಿಲ** – ಅಧ್ಯಕ್ಷರು, ಆಡಳಿತ ಸಮಿತಿ

**ಮತ್ತು ಆಡಳಿತ ಮಂಡಳಿ ಸರ್ವ ಸದಸ್ಯರು**

**ಪೂಜಾ ಸಮಯ**

ಬೆಳಗ್ಗೆ ಗಂಟೆ 7–30 ● ಮಧ್ಯಾಹ್ನ ಗಂಟೆ 12–30 ● ರಾತ್ರಿ ಗಂಟೆ 8–00

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ

**ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ - 574 111**



ಪ್ರಿಯ ಭಗವದ್ಭಕ್ತರೇ,

**ಸ್ವಸ್ತಿ। ಶ್ರೀ ಶೋಭಕೃತ್ ನಾಮ ಸಂವತ್ಸರದ ಆಶ್ವಯುಜ ಶುದ್ಧ ಪಾಡ್ಯದಿಂದ ನವಮಿ ದಿನಾಂಕ 15-10-2023ರಿಂದ 23-10-2023ರ ಪರ್ಯಂತ**

### ನವರಾತ್ರ ಮಹೋತ್ಸವವು

**ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಪ್ರಸನ್ನ ಪಾರ್ವತೀ ಸನ್ನಿಧಾನದಲ್ಲಿ ಮಹಾಪೂಜೆ, ಹೂವಿನಪೂಜೆ ಜರಗಲಿರುವುದು.**

**ದಿನಾಂಕ 22-10-2023ನೇ ಆದಿತ್ಯವಾರ ಶ್ರೀ ಕ್ಷೇತ್ರದಲ್ಲಿ**

**ಶ್ರೀ ಚಂಡಿಕಾ ಹೋಮ ಹಾಗೂ**

**ಶ್ರೀ ಶಂಕರ ಭಗವತ್ಪಾದಾಚಾರ್ಯರ ಪ್ರತಿಷ್ಠಾವರ್ಧಂತಿಯು ಸಂಪನ್ನಗೊಳ್ಳಲಿರುವುದು.**

**ಜಗದಭಿರಾಮ ಸ್ವಾಮಿ** – ಪ್ರಧಾನ ಅರ್ಚಕರು

**ಪಿ. ಡಿ. ಶೇಖರ ರಾವ್** – ಅಧ್ಯಕ್ಷರು

**ಕರುಣಾಕರ ಬೆಳ್ಳೆ**, **ಪಿ. ರಘುವೀರ ರಾವ್** – ಗೌರವಾಧ್ಯಕ್ಷರು

**ಶ್ರೀನಿವಾಸ ಶರ್ಮ** ಪಾದೆಬೆಟ್ಟು – ಕೋಶಾಧ್ಯಕ್ಷರು

**ನಯನಾಭಿರಾಮ ಸ್ವಾಮಿ** – ಕಾರ್ಯದರ್ಶಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.)

ಮತ್ತು **ಸರ್ವ ಸದಸ್ಯರು, ಊರ ಹತ್ತು ಸಮಸ್ತರು**

## ಗಾಯತ್ರಿ ಹೋಮ



ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 86ನೇ ವರ್ಷದ ಮಹಾಸಭೆಯ ಪ್ರಯುಕ್ತ 'ಗಾಯತ್ರಿ ಹೋಮ'ವನ್ನು ನಡೆಸಲಾಯಿತು. ವೇ. ಮೂ. ಪಾವಂಜೆ ಸುಬ್ರಹ್ಮಣ್ಯ ಭಟ್ ಪೌರೋಹಿತ್ಯದಲ್ಲಿ, ಶ್ರೀ ಉದಯ ಕುಮಾರ್ ಪಿ. ಮತ್ತು ಶ್ರೀಮತಿ ಭುವನಾ ದಂಪತಿಗಳ ಯಜಮಾನಿಕೆಯಲ್ಲಿ ಸದಸ್ಯರು ಹವನದಲ್ಲಿ ಭಾಗಿಯಾದರು.

NAVADURGA FINANCIALS
Estd 1998
SCAN ME TO KNOW MORE!!!

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**

### 'ನಾಡಹಬ್ಬ' ತಾ. 29-10-2023ನೇ ಆದಿತ್ಯವಾರ

**ಕಾರ್ಯಕ್ರಮಗಳು**



ಬೆಳಗ್ಗೆ 7-30ರಿಂದ : ಗುರುಸಪರ್ಯಾ
ಬೆಳಗ್ಗೆ 8-30ರಿಂದ : ಉಪಾಹಾರ
ಬೆಳಗ್ಗೆ 9-00ರಿಂದ : **ಲಲಿತಾ ಸಹಸ್ರನಾಮ ಪಾರಾಯಣ**
10-30ರಿಂದ 11-30 : **ಸುಗಮ ಸಂಗೀತ** (ಜಾನಪದ ಗೀತೆ, ಭಾವಗೀತೆ) **ಸ್ಪರ್ಧೆ**
ವಿಭಾಗ 1 : 5 ವರ್ಷದಿಂದ 15 ವರ್ಷದ ವರೆಗೆ
ವಿಭಾಗ 2 : 16 ವರ್ಷದಿಂದ 50 ವರ್ಷದ ವರೆಗೆ
ವಿಭಾಗ 3 : 51ರಿಂದ ಮೇಲ್ಪಟ್ಟು



10-30ರಿಂದ 11-30 : **ಚಿತ್ರ ಬಿಡಿಸುವ ಸ್ಪರ್ಧೆ**
ವಿಭಾಗ 1 : 1 ತರಗತಿಯಿಂದ 5ನೇ ತರಗತಿ
ವಿಭಾಗ 2 : 6 ತರಗತಿಯಿಂದ 10ನೇ ತರಗತಿ
11-30ರಿಂದ 12-00 : **ಹುಲಿ ಕುಣಿತ ಸ್ಪರ್ಧೆ**
(ಮಹಿಳಾ ವಿಭಾಗ, ಪುರುಷರ ವಿಭಾಗ ಮತ್ತು ಮಕ್ಕಳ ವಿಭಾಗ)
12-15ರಿಂದ 1-00 : **ಪ್ರತಿಭಾ ಪುರಸ್ಕಾರ**
ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ



ಮಧ್ಯಾಹ್ನ 1-00ರಿಂದ : **ಭೋಜನ**
2-00ರಿಂದ : ಯಕ್ಷಗಾನ – **'ತ್ರಿಪುರ ಮಥನ'**
ನಿರ್ದೇಶನ : ಶ್ರೀ ಸಂಜಯ ಕುಮಾರ ಫಲಿಮಾರ್
ಯಕ್ಷಗಾನ ಪ್ರಾಯೋಜಕರು : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್
ಸಂಜೆ 5-00ರಿಂದ : **ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ**
ಬಹುಮಾನ ಪ್ರಾಯೋಜಕರು : **ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ, ವಕೀಲರು ಮತ್ತು ನೋಟರಿ ಹಾಗೂ ಶ್ರೀಮತಿ ಭುವನಾ ನಾಗರಾಜ್, ಮಂಗಳೂರು**

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 86ನೇ ಮಹಾಸಭೆ



ಮಂಗಳೂರಿನ ಬಿಜೈಯಲ್ಲಿ ಪ್ರಧಾನ ಕಛೇರಿ ಹೊಂದಿರುವ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಮಹಾಸಭೆಯು ಸೆಪ್ಟಂಬರ್ 24ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಕರುಣ್ ರಾವ್ ಬೆಳ್ಳೆಯವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘವು ಒಟ್ಟು ರೂ. 250 ಕೋಟಿ ವ್ಯವಹಾರ ನಡೆಸಿ, ರೂ. 113.93 ಲಕ್ಷ ಲಾಭಗಳಿಸಿದೆ. ಲಾಭವನ್ನು ಸಹಕಾರಿ ನಿಯಮದಂತೆ ವಿವಿಧ ವಿಭಾಗದಲ್ಲಿ ಹಂಚಿ, ಈ ಬಾರಿ ಸದಸ್ಯರಿಗೆ ಶೇ. 10 ಡಿವಿಡೆಂಡ್ ನೀಡುವುದಾಗಿ ಅವರು ಘೋಷಣೆ ಮಾಡಿ, ಸಂಘದ ಅಭಿವೃದ್ದಿಗೆ ಸಹಕರಿಸಿದ ಎಲ್ಲರನ್ನೂ ಅಭಿನಂದಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ಸಾಯಿಪ್ರಸಾದ್ ಇವರು ವರದಿ ಮತ್ತು ಲೆಕ್ಕಪತ್ರ ಮಂಡಿಸಿದರು. ಈ ಸಂದರ್ಭದಲ್ಲಿ ಸದಸ್ಯರು ಸಲಹೆ–ಸೂಚನೆ ನೀಡಿದರು. ಸಹಕಾರ ಇಲಾಖೆಯ ಡಿ.ಸಿ.ಎಂ. ಕೋರ್ಸ್‌ನಲ್ಲಿ ಡಿಸ್ಟಿಂಕ್ಷನ್ ಪಡೆದ ಸಂಘದ ಸುರತ್ಕಲ್ ಶಾಖೆಯ ಸಿಬ್ಬಂದಿಯಾದ ಶ್ರೀಮತಿ ಪಲ್ಲವಿಯವರಿಗೆ ಗೌರವಾರ್ಪಣೆ ಮಾಡಲಾಯಿತು. ಆಡಳಿತ ಮಂಡಳಿಯ ನಿರ್ದೇಶಕರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಶ್ರೀಮತಿ ಪುಣ್ಯಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು. ಮೂಡಬಿದರೆ ಶಾಖೆಯ ವ್ಯವಸ್ಥಾಪಕರಾದ ಶ್ರೀ ಸಂದೀಪ್ ಕುಮಾರ್‌ರವರು ನಿರೂಪಿಸಿದರು. ಸಂಘದ ನಿರ್ದೇಶಕರಾದ ಶ್ರೀ ಟಿ. ಬಿ. ಮೋಹನ್ ರಾವ್ ವಂದಿಸಿದರು. ಸಭೆಯ ಮುಂಚಿತವಾಗಿ ಭಜನಾ ಕಾರ್ಯಕ್ರಮ ನಡೆಯಿತು.

# ಅಪಾರಕೀರ್ತಿ ಗಳಿಸಿ...



**ಕು| ಮಾನಸ** ಈ ಬಾರಿಯ ಬಿ.ಎ.ಎಂ.ಎಸ್. ಪರೀಕ್ಷೆಯಲ್ಲಿ ಶೇ. 80.6 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಉಡುಪಿ ಕೊರಂಗ್ರಪಾಡಿ ಶ್ರೀ ಮಂಜುನಾಥ್ ರಾವ್ ಮತ್ತು ಶ್ರೀಮತಿ ಸಹನಾ ಇವರ ಸುಪುತ್ರಿ ಹಾಗೂ ಉಡುಪಿಯ ಎಸ್.ಡಿ.ಎಂ. ಆಯುರ್ವೇದ ಕಾಲೇಜಿನ ವಿದ್ಯಾರ್ಥಿನಿ.



ಮಂಗಳೂರಿನ **ಕು| ತನ್ವೀ ರಾವ್** ಕಲರ್ಸ್ ಕನ್ನಡ 10ನೇ ಅನುಬಂಧ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಪೀಪಲ್ಸ್ ಫೇವರೆಟ್ ಐಕಾನ್ (ಫೀಮೇಲ್) ಅವಾರ್ಡ್ ಪಡೆದಿದ್ದಾಳೆ. ಈಕೆ ಶ್ರೀ ಹರಿಪ್ರಸಾದ್ ರಾವ್ ಮತ್ತು ಶ್ರೀಮತಿ ಸ್ವರ್ಣಗೌರಿ ಇವರ ಸುಪುತ್ರಿ.

# ಶುಭ ವಿವಾಹ


ಎರ್ಮಾಳ್ ಬಡಾ ಶ್ರೀ ಸತೀಶ್ ರಾವ್ ಮತ್ತು ಶ್ರೀಮತಿ ಕಸ್ತೂರಿಯವರ ಸುಪುತ್ರ **ಡಾ| ಮಿಥುನ್** ಹಾಗೂ ದಿ| ಪಡುಬೆಳ್ಳೆ ಬಿ. ವಾಮನ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾರವರ ಸುಪುತ್ರಿ **ಡಾ| ವಂದನಾ** ಇವರ ವಿವಾಹವು ತಾರೀಕು 21–9–2023ನೇ ಗುರುವಾರ ಬ್ರಹ್ಮಾವರ 'ಶಾಮಿಲಿ ಶಾನ್ಯ ಹಾಲ್'ನಲ್ಲಿ ನಡೆಯಿತು.

# ಅಳಿದ ನಮ್ಮನೆ... ಇಲ್ಲಿರುವುದು ಸುಮ್ಮನೆ...




**ಕುಂಪಲ ಜಗದೀಶ್ ರಾವ್** ತಾರೀಕು 21–9–2023ರ ಗುರುವಾರ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ **ಕುಡ್ವ ಶ್ರೀ ವಿಜಯ ಕುಮಾರ್** (73) ತಾರೀಕು 19–9–2023ರ ಮಂಗಳವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಅದ್ಯಪಾಡಿ ದಿ| ಸದಾಶಿವ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಭಾರತಿ ಎಸ್. ರಾವ್** (87) ತಾರೀಕು 20–9–2023ನೇ ಬುಧವಾರ ನಿಧನ ಹೊಂದಿದರು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಬಾಣಸಿಗ, ಪಾಕತಜ್ಞ **ಅದ್ಯಪಾಡಿ ವಿಜಯ್ ಕುಮಾರ್ ಭಟ್** (61) ಶುಕ್ರವಾರ ನಿಧನರಾದರು. ಅವಿಭಜಿತ ದ. ಕ. ಜಿಲ್ಲೆಯ ಹಲವು ಪ್ರಮುಖ ದೇಗುಲ, ಮಂದಿರ ಹಾಗೂ ದೈವಸ್ಥಾನಗಳ ವಾರ್ಷಿಕ ಜಾತ್ರೆ, ಬ್ರಹ್ಮಕಲಶ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅನ್ನಸಂತರ್ಪಣೆಯ ಜವಾಬ್ದಾರಿ ವಹಿಸಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಅವರು ಪತ್ನಿಯನ್ನು ಇಬ್ಬರು ಪುತ್ರರು ಮತ್ತು ಪುತ್ರಿ ಅಗಲಿದ್ದಾರೆ.



**ಶ್ರೀಮತಿ ಲಕ್ಷ್ಮೀಯಮ್ಮ** (75) ಕೀರ್ತಿಶೇಷ ಸುಬ್ರಾಯ ಭಟ್ ನೆಟ್ಲ, ಕಡೇಶಿವಾಲಯ ಇವರ ಧರ್ಮಪತ್ನಿ. ನಂದಾವರದಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●



ದಿ| ಉಬರಳೆ ಸೀತಾರಾಮಯ್ಯನವರ ಧರ್ಮಪತ್ನಿ **ಶ್ರೀಮತಿ ಪಾರ್ವತಿ ಉಬರಳೆ** (89) ತಾರೀಕು 5–10–2023ನೇ ಗುರುವಾರ ನಿಧನ ಹೊಂದಿದರು. ಇವರು ಆರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

●●●



ಅಡೂರು ಚರಕಂಡ ವೆಂಕಪ್ಪಯ್ಯ ಮೇರ್ಟರವರ ಧರ್ಮಪತ್ನಿ ಪದ್ಮಾಕ್ಷಿ ಇವರು (75) ಇವರು ತಾರೀಕು 02–10–2023ನೇ ಸೋಮವಾರ ವಿಧಿವಶರಾದರು. ಇವರು ಪತಿ, ಮಗ–ಸೊಸೆ, ಇಬ್ಬರು ಹೆಣ್ಣು ಮಕ್ಕಳು, ಆರು ಜನ ಮೊಮ್ಮಕ್ಕಳನ್ನು ಅಗಲಿದ್ದಾರೆ.

●●●



**ನಂದಿಕೂರ್ ಶ್ರೀ ಪ್ರಸನ್ನ ಕುಮಾರ್ ಉಪಾಧ್ಯಾಯ** (81) ತಾರೀಕು 22–8–2023ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

# ನವರಾತ್ರಿ ಹಬ್ಬ



ನವರಾತ್ರಿಯು ನಾಡಿನ ಸಡಗರ ಸಂಭ್ರಮದ ಹಬ್ಬವು ।
ನವಶಕ್ತಿಯನು ತುಂಬುವ ನವದೇವಿಯರ ಹಬ್ಬವು ।
ನವದುರ್ಗೆಯರ ಭಕ್ತಿಯಲಿ ಆರಾಧಿಸುವ ಅನುದಿನವು ।
ಜನರಲ್ಲಿ ಮೂಡಲಿ ನವಭಾವನೆಗಳ ಚೈತನ್ಯವು ॥ ೧ ॥

ನವರಾತ್ರಿಯ ನವದಿನದಲಿ ದುರ್ಗಾಮಾತೆಯರ ಸ್ಮರಿಸುತಲಿ ।
ಕರವ ಮುಗಿದು ಕೃಪೆಯ ಬೇಡುವ ನಮ್ಮ ಬಾಳಲಿ ।
ನಾಡಹಬ್ಬದ ಸಂಸ್ಕೃತಿಯ ಹಿರಿಮೆ ಎಲ್ಲೆಲ್ಲೂ ಹರಡಲಿ ।
ಸುಖ-ಶಾಂತಿ ಸಮೃದ್ಧಿಯು ದೇಶದಲ್ಲಿ ನೆಲೆಸಲಿ ॥ ೨ ॥

ನವವಿಧದ ಪೂಜೆ ನವವಿಧದ ಅಲಂಕಾರ ದೇವಿಗೆ ।
ನಾಡಜನತೆ ಕಣ್ತುಂಬಿ ನಮಿಸುವರು ದುರ್ಗೆಗೆ ।
ದುಷ್ಟಶಿಕ್ಷಕಿ ಶಿಷ್ಟರಕ್ಷಕಿ ಚಾಮುಂಡಿ ದೇವಿ ಹರಸುವಳು ।
ಕಷ್ಟಗಳನು ಪರಿಹರಿಸಿ ಎಲ್ಲರನ್ನು ಪೊರೆಯುವಳು ॥ ೩ ॥

ವಿದ್ಯಾಬುದ್ಧಿ ನೀಡುವ ಶ್ರೀದೇವಿ ಶಾರದಾ ಮಾತೆಯೆ ।
ಧನಕನಕ ಐಶ್ವರ್ಯಗಳ ವರವೀವ ಭಾಗ್ಯಲಕ್ಷ್ಮಿಯೆ ।
ದುರಿತಗಳ ಕಳೆಯುತ ಎಲ್ಲರನ್ನು ಹರಸು ತಾಯೇ ।
ದಿವ್ಯದೃಷ್ಟಿಯ ಹರಿಸಿ ಪೊರೆಯೆ ಜಗದಂಬಿಕೆಯೆ ॥ ೪ ॥

ಜಗವ ಪೊರೆವ ಜಗದಂಬಿಕೆಯರ ಆರಾಧಿಸುವ ನವರಾತ್ರಿಯಲಿ ।
ಈ ಪರ್ವದಲ್ಲಿ ಜನರಿಗೆ ನವ ಬದುಕು ಸಮೃದ್ಧಿ ದೊರೆಯಲಿ ।
ಸೃಷ್ಟಿ-ಸ್ಥಿತಿ-ಲಯ ಸ್ವರೂಪಿಣಿಯರು ನಮಗೆ ಕರುಣೆ ತೋರಲಿ ।
ನವದುರ್ಗೆಯರು ಅನವರತ ನಮ್ಮನ್ನೆಲ್ಲ ಕಾಪಾಡಲಿ ॥ ೫ ॥

ಬರೆದವರು : **ಶ್ರೀಮತಿ ಮಂಜುಳಾ ಮುರಳೀಧರ್ ರಾವ್, ಮಂಗಳೂರು**

## ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.)
### ಬ್ರಹ್ಮಾವರ ತಾಲೂಕು

## ನೂತನ ಪದಾಧಿಕಾರಿಗಳು 2023

ಅಧ್ಯಕ್ಷರು : **ಶಂಭುಶಂಕರ ರಾವ್** ಸಂಚಾಲಕರು : **ಉದಯ ಬಾರ್ಕೂರು**
ಕಾರ್ಯದರ್ಶಿ : **ಸವಿತಾ ಎರ್ಮಾಳ್** ಖಜಾಂಚಿ : **ನೀಲಕಂಠ ರಾವ್**

ಉಪಾಧ್ಯಕ್ಷರು :
**ಭಾಸ್ಕರ ಹೆಬ್ಬಾರ್, ಶಾಮಣ್ಣ, ಗಿರೀಶ ತಂತ್ರಾಡಿ, ಸ್ಮಿತಾರಾಣಿ, ಉಮೇಶ ರಾವ್**

ಗೌರವಾಧ್ಯಕ್ಷರು : **ಮಂಜುನಾಥ ರಾವ್**

ಗೌರವ ಸಲಹೆಗಾರರು : **ರಾಮಚಂದ್ರ ರಾವ್, ಡಾ. ವೈ. ರವೀಂದ್ರನಾಥ ರಾವ್, ರಮೇಶ್ ರಾವ್ ಪಾಂಡೇಶ್ವರ, ಗುರುರಾಜ ರಾವ್ ಆರೂರು, ಅಶೋಕ ರಾವ್ ಬ್ರಹ್ಮಾವರ, ಪಿ. ಜಯರಾಮ ರಾವ್, ಸುದರ್ಶನ ರಾವ್**

ಜತೆ ಕಾರ್ಯದರ್ಶಿ : **ರವೀಂದ್ರ ರಾವ್**

ಸದಸ್ಯರು : **ಸತೀಶ ರಾವ್ ಕೂಡ್ಲಿ, ಚಾಮರಾಜ ರಾವ್ ಮೈರ್ಕೊಮೆ ಕುಮಾರಸ್ವಾಮಿ ಬಿ. ಆರ್., ಶ್ರೀಕೃಷ್ಣ ಶಾನುಭೋಗ್, ಗಣೇಶ ರಾವ್ ಮಸ್ಕಿಬೈಲ್**

### ಮಹಿಳಾ ವಿಭಾಗ :

ಅಧ್ಯಕ್ಷೆ : **ನಾಗರತ್ನ ಹೆಬ್ಬಾರ್** ಉಪಾಧ್ಯಕ್ಷೆ : **ಗೌರಿ ಎಸ್. ರಾವ್**
ಕಾರ್ಯದರ್ಶಿ : **ಚಂದ್ರಿಕಾ**

ಗೌರವ ಸಲಹೆಗಾರರು : **ಶಕುಂತಲಾ ರಾವ್, ಗಾಯತ್ರಿ ಶಾಸ್ತ್ರಿ ರಾಜೇಶ್ವರಿ ಎ. ರಾವ್, ವೀಣಾ ಗಣೇಶ ರಾವ್, ಜಯಲಕ್ಷ್ಮಿ ರಾವ್, ರಾಜೇಶ್ವರಿ ಯು. ರಾವ್**

### ಯುವ ವೇದಿಕೆ :

ಅಧ್ಯಕ್ಷರು : **ರಾಮಚಂದ್ರ ರಾವ್ ಹೆರಂಜೆ** ಕಾರ್ಯದರ್ಶಿ : **ಭರತ ರಾವ್ ಬಾರ್ಕೂರು**
ಉಪಾಧ್ಯಕ್ಷರು : **ಸ್ಫೂರ್ತಿ ರಾವ್ ತಂತ್ರಾಡಿ** ಕೋಶಾಧಿಕಾರಿ : **ಶಿವಪ್ರಸಾದ್ ಕೂಡ್ಲಿ**

ಗೌರವ ಸಲಹೆಗಾರರು :
**ರಾಘವೇಂದ್ರ ರಾವ್ ಮಸ್ಕಿಬೈಲ್, ಗಣೇಶ್ ಹೆಬ್ಬಾರ್ ಗುಡ್ಡೆಟ್ಟು ಹರೀಶ್ ಹೆಬ್ಬಾರ್, ಜನಾರ್ದನ ರಾವ್ ಹಾವಂಜೆ**

### ವಲಯ ಪ್ರತಿನಿಧಿಗಳು :

| | |
|---|---|
| ಬಾರ್ಕೂರು : **ಸತೀಶ್ ರಾವ್** | ಸಾಲಿಗ್ರಾಮ : **ಜಲಜಾ ಎಸ್. ರಾವ್** |
| ಮಂದಾರ್ತಿ : **ಗಿರೀಶ್ ರಾವ್** | ಶಿರಿಯಾರ : **ಗಣೇಶ್ ಹೆಬ್ಬಾರ್** |
| ಬ್ರಹ್ಮಾವರ : **ಗೌರಿ ಎಸ್. ರಾವ್** | ನೀಲಾವರ : **ಉಮೇಶ ರಾವ್** |

ಪತ್ರಿಕೆಗೆ ಶುಭ ಬಯಸುವ-
ಮೊಬೈಲ್ : 9972989678
9448104174
**ರವಿಕಿರಣ್ ಕ್ರೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Celebrating 60th Year 1963-2023
**RAJESH POWER PRESS**
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

Prop. : P. Srikanth Rao Mobile : 9343361618
**M/s. SAMARPAN**
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4



ಪತ್ರಿಕೆಗೆ ಶುಭ ಬಯಸುವ-
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ -
**G. K. KOLPE**
House No. 7-3-31-D1, 'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002



**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



# ‘ಶ್ರೀಶಂಕರಕೃಪಾ’ - ಸರಸ್ವತ್ಯುಪಾಸನೆ - ಒಂದು ಒಳನೋಟ

“ಪ್ರಜ್ಞೆಯ ಉನ್ನತಸ್ತರಗಳನ್ನು ತಲುಪುವ ಪ್ರಯತ್ನವೇ ಉಪಾಸನೆಯ, ಸಾಧನೆಯ ಪರಮೋತ್ಕೃಷ್ಟ ಗುರಿ. ಈ ಗುರಿಸಾಧನೆಗೆ ಭಾರತೀಯ ಋಷಿ–ಮಹರ್ಷಿಗಳು, ಸಂತರು, ಮಹಾತ್ಮರು ಕಂಡುಕೊಂಡ ಸೋಪಾನಗಳೆಂದರೆ – ಮಂತ್ರ, ಜಪ, ಪೂಜೆ, ಉಪಾಸನೆ, ಧ್ಯಾನ, ನಿಷ್ಕಾಮಕರ್ಮ ಇತ್ಯಾದಿಗಳು. ಅಹಂಕಾರದ ಪ್ರವಾಸದಲ್ಲೇ ತೇಲುತ್ತ, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಅಸಾಧ್ಯ. ಅಹಂಕಾರವನ್ನು ಅತಿಕ್ರಮಿಸಿ ಪ್ರಜ್ಞೆಯ ಏಣಿಮೆಟ್ಟಿಲಿನ ತುದಿಯನ್ನು ಏರಬೇಕು. ಅಲ್ಲಿ ನಿಂತಾಗ ಪೂರ್ಣದೃಷ್ಟಿಯು ಲಭಿಸುತ್ತದೆ” ಅನುಭವಿಗಳ ದೃಢವಾದ ಈ ನಿಲುವಿನ ಹಿನ್ನೆಲೆಯಲ್ಲಿ “ಸರಸ್ವತೀ – ಉಪಾಸನೆಯ” ಚಿಂತನ–ಮಂಥನ ನಡೆಯಬೇಕು.

**ಏಕಂ ಸತ್ ವಿಪ್ರಾಃ ಬಹುಧಾ ವದಂತಿ** – “ಪರಮಾತ್ಮನು ಒಬ್ಬನೇ ಆದರೂ, ಜ್ಞಾನಿಗಳು ನಾನಾರೂಪಗಳಿಂದ ಕಂಡುಕೊಂಡಿದ್ದಾರೆ” – ಎನ್ನುವ ಋಗ್ವೇದದ ಮಾತು, ಭಾರತೀಯರ ಬಹುದೇವತಾರಾಧನೆಯ ತತ್ತ್ವ, ಸತ್ವ ಆಗಿದೆ. ಶಕ್ತಿ–ಭಕ್ತಿಗಳ ಪುಣ್ಯಭೂಮಿಯಾದ ಭಾರತದಲ್ಲಿ ಶಕ್ತಿಯ ಆರಾಧನೆಗೆ ವಿಶಿಷ್ಟವಾದ ಮಹತ್ತ್ವವಿದೆ. ಆದಿಶಕ್ತಿಯನ್ನೇ ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿಯ ರೂಪದಲ್ಲಿ ಆರಾಧಿಸುವ ದಿವ್ಯಪರಂಪರೆ ಇದೆ.

ಭಕ್ತಿ, ಶ್ರದ್ಧೆಗಳ ಉದ್ದೀಪನಕ್ಕೆ ಆರಾಧಿಸುವ ದೇವ–ದೇವತೆಗಳ ಸ್ವರೂಪ, ಗುಣ, ಮಹಿಮೆಗಳ ಸ್ಪಷ್ಟವಾದ ಅರಿವು, ಅವುಗಳ ಕುರಿತಾದ ಚಿಂತನೆಗಳು ತುಂಬಾ ಆವಶ್ಯಕವಾಗಿವೆ. ನಿಯಂತ್ರಿತ ಅವ್ಯಕ್ತಶಕ್ತಿಯನ್ನು ತಿಳಿಯುವ ಪ್ರಯತ್ನದ ಮೂಲಕ ಆತ್ಮೋನ್ನತಿಯನ್ನು ಸಾಧಿಸಲು ಇರುವ ಮಾರ್ಗವೇ ಉಪಾಸನೆ. ನಮ್ಮ ಸಂಸ್ಕೃತಿಯಲ್ಲಿ ವಿದ್ಯೆಗೂ, ಬುದ್ಧಿಗೂ, ಮಾತಿಗೂ ಅಭಿಮಾನಿದೇವತೆಯಾಗಿ ಗುರುತಿಸಲ್ಪಟ್ಟಿರುವ ದೇವತೆಯೇ ಸರಸ್ವತೀ, ವಾಣೀ, ವಾಗ್ದೇವೀ, ವಾಗೀಶ್ವರೀ, ಶಾರದೇ ಇತ್ಯಾದಿ ನಾಮಗಳಿಂದ ಉಲ್ಲೇಖಿತಳಾಗಿ, ಉಪಾಸನೆ ಗೊಳ್ಳುತ್ತಿರುವ ದೇವತೆಯು ವೇದ, ಪುರಾಣ, ಇತಿಹಾಸ ಕಾಲಗಳಿಂದಲೂ ಪ್ರಸಿದ್ಧಳಾಗಿದ್ದಾಳೆ. ಸರಸ್ವತೀದೇವಿಯ ಸ್ಥೂಲ, ಸೂಕ್ಷ್ಮ, ಕಾರಣ ಹಾಗೂ ಕಾರಣಾತೀತವಾದ ರೂಪಗಳನ್ನು ತಿಳಿಯುವುದೇ ಉಪಾಸನೆಯ ರಹಸ್ಯ.

ಶೃಂಗೇರಿಪೀಠದ, ಬ್ರಹ್ಮೀಭೂತ – ಅಭಿನವವಿದ್ಯಾತೀರ್ಥಸ್ವಾಮಿಗಳು ತಮ್ಮ ಉಪನ್ಯಾಸದ ಆರಂಭದಲ್ಲಿ ಶಾರದೆಯನ್ನು ಎರಡು ಶ್ಲೋಕಗಳಿಂದ ಸ್ತುತಿಸುತ್ತಿದ್ದ ಬಗೆಯನ್ನು ಸ್ಮರಿಸಿಕೊಳ್ಳೋಣ.

**ಶಾರದಾ ಶಾರದಾಂಭೋಜವದನಾ ವದನಾಂಬುಜೇ ।**
**ಸರ್ವದಾ ಸರ್ವದಾಸ್ಮಾಕಂ, ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥**

“ಶರತ್ಕಾಲದ ಕಮಲದಂತೆ ಮುಖವುಳ್ಳ ಶಾರದಾದೇವಿಯೇ ! ನನ್ನ ಮುಖಕಮಲದಲ್ಲಿ ಎಲ್ಲಾ ಕಾಲದಲ್ಲಿ ಬಂದು ನೆಲಸು”.

**ಶರದಿಂದುವಿಕಾಸಿ – ಮಂದಹಾಸಾಂ, ಸ್ಫುರದಿಂದೀವರಲೋಚನಾಭಿರಾಮಾಮ್ ।**
**ಅರವಿಂದಸಮಾನ – ಸುಂದರಾಸ್ಯಾಮರವಿಂದಾಸನ – ಸುಂದರೀಮುಪಾಸೇ ।**

“ಶರತ್ಕಾಲದ ಪೂರ್ಣಚಂದ್ರನಂತೆ ಮಂದಹಾಸವುಳ್ಳ” ಹೊಳೆಯುವ – ಕನ್ನೈದಿಲೆಯಂತೆ ಕಣ್ಣುಗಳಿಂದ ಸುಂದರವಾಗಿರುವ, ಕಮಲದಂತಹ ಸುಂದರವಾದ ಮುಖವುಳ್ಳ ಕಮಲಾಸನಳಾಗಿರುವ ಸುಂದರಿಯಾದ ಶಾರದೆಯನ್ನು ಉಪಾಸಿಸುತ್ತೇನೆ.”

ಜ್ಞಾನಸ್ವರೂಪಳಾಗಿರುವ ಶಾರದೆಯನ್ನು, ಜ್ಞಾನಸುಧೆಯನ್ನು ಉಣಬಡಿಸಿರುವ ವೇದವ್ಯಾಸ ಶುಕಮುನಿಗಳ ಪರಂಪರೆಯನ್ನು, ಆದಿಶಂಕರ – ಸ್ವರೂಪರೇ ಆಗಿರುವ ಪೀಠಾಧಿಪತಿಗಳಾಗಿರುವ ಗುರುಪರಂಪರೆಯನ್ನು ಧ್ಯಾನಿಸುತ್ತಾ, ಚಿಂತನೆಯನ್ನು ನಡೆಸಿದಾಗ ವಿಚಾರಗಳ ಸ್ಫುರಣೆಯು ಸುಲಭ ಸಾಧ್ಯವಾಗುತ್ತದೆ.

**ವೇದ – ಪುರಾಣ – ಇತಿಹಾಸಗಳಲ್ಲಿ ಸರಸ್ವತಿಯ ಗುಣರೂಪಗಳ ಚಿಂತನೆ :**

ಋಗ್ವೇದದಲ್ಲಿ ಸರಸ್ವತಿಯನ್ನು ಸ್ತುತಿಸುವ ಒಂದು ಮಂತ್ರ – ಹೀಗಿದೆ.

**ಪ್ರಣೋ ದೇವೀ ಸರಸ್ವತೀ । ವಾಜೇಭಿರ್ವಾಜಿನೀವತೀ । ಧೀನಾಮವಿತ್ರ್ಯವತು ॥**

ದೇವತಾತ್ಮಳೂ, ಅನ್ನಯುಕ್ತಳೂ, ಸ್ತುತಿಕರ್ತರ ರಕ್ಷಕಳೂ ಆದ ಸರಸ್ವತಿಯು ಅನ್ನಗಳಿಂದ ನಮ್ಮನ್ನು ರಕ್ಷಿಸಿ ಪೂರ್ಣವಾಗಿ ತೃಪ್ತಿಗೊಳಿಸಲಿ.

ಸರಸ್ವತೀದೇವಿಯು ಗುಪ್ತಗಾಮಿನೀ ನದಿಯಾಗಿಯೂ ಪ್ರವಹಿಸುತ್ತಿದ್ದಾಳೆ. ನದೀ ಸ್ವರೂಪದ ಅವಳ ಕುರಿತಾದ ಪ್ರಾರ್ಥನೆಯ ಭಾವದ ಸ್ವರೂಪವು ಹೀಗಿದೆ.

“ಯಜ್ಞವನ್ನು ನಿರ್ವಹಿಸುವ, ಯಜ್ಞದ ಕರ್ಮಫಲವನ್ನು ನೀಡುವ, ಶತ್ರುವನ್ನು ನಾಶಮಾಡಿ ಜಯನೀಡುವ, ಎಲ್ಲಾ ಇಂದ್ರಿಯಗಳಿಗೆ ಅನ್ನವನ್ನು ನೀಡಿ ಬುದ್ಧಿಯನ್ನು ಪ್ರಚೋದಿಸುವ, ವಿದ್ಯೆಯನ್ನು ನೀಡುವ ದೇವತಾಸ್ವರೂಪಳೂ ಆಗಿರುವ ದೇವಿಯೇ! ನಮ್ಮನ್ನು ರಕ್ಷಿಸು”.

ಮಾರ್ಕಂಡೇಯ ಪುರಾಣದಲ್ಲಿ ಬರುವ “ದುರ್ಗಾಸಪ್ತಶತೀ”ಯು ದೇವಿಯ ಆರಾಧನೆಗೆ ಉಪಾಸನೆಗೆ ಆಕರಗ್ರಂಥ. ಇದರ ಪಾರಾಯಣವು “ಸಕಲಾರ್ಥಗಳನ್ನು ನೀಡುತ್ತದೆ” ಎಂಬ ದೃಢವಿಶ್ವಾಸವು ಆಸ್ತಿಕರಲ್ಲಿದೆ. ಇದರ ಪ್ರಥಮಚರಿತ್ರೆಯಲ್ಲಿ ಆದಿಶಕ್ತಿಯನ್ನು ಕಾಳಿಯಾಗಿ, ಮಧ್ಯಮಚರಿತ್ರೆಯಲ್ಲಿ ಮಹಾಲಕ್ಷ್ಮಿಯಾಗಿ ಹಾಗೂ ಉತ್ತಮಚರಿತ್ರೆಯಲ್ಲಿ ಸರಸ್ವತಿಯಾಗಿ ಸ್ತುತಿಸಲಾಗಿದೆ. ಸರಸ್ವತಿಯು ಸಾಮವೇದಸ್ವರೂಪಳೂ, ಜ್ಞಾನಶಕ್ತಿ ಸ್ವರೂಪಳೂ, ಸತ್ವಗುಣಪ್ರದಾಯಿನಿಯೂ ಆಗಿ, ಶುಂಭ, ನಿಶುಂಭರೆಂಬ ರಕ್ಕಸರನ್ನು ಸಂಹರಿಸುತ್ತಾಳೆ.

ಇತಿಹಾಸ ಕಾವ್ಯಗಳೆಂದು ಪ್ರಸಿದ್ಧವಾಗಿರುವ ರಾಮಾಯಣದ ದಶರಥನೂ, ಶ್ರೀರಾಮನೂ, ಮಹಾಭಾರತದಲ್ಲಿ ಅರ್ಜುನನೂ ದೇವಿಯನ್ನು ಆರಾಧಿಸಿದ ಉಲ್ಲೇಖಗಳಿವೆ. ಸರಸ್ವತೀದೇವಿಯು ಆದಿಕವಿ ವಾಲ್ಮೀಕಿಯ ಬಾಯಿಯಲ್ಲಿ ನಿಂತು, ಹೊರಹೊಮ್ಮಿಸಿದ ಶ್ಲೋಕವು ರಾಮಾಯಣದ ಮಂಗಳಶ್ಲೋಕವೇ ಆಗಿದೆ.

**ಮಾನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।**
**ಯತ್ ಕೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥**

“ಲಕ್ಷ್ಮೀಗೆ ಆಶ್ರಯನಾದ ವಿಷ್ಣುವೇ! (ಮಾನಿಷಾದ) ತಪ್ಪುದಾರಿ ಹಿಡಿದ ರಾಕ್ಷಸ ದಂಪತಿಗಳಾದ ರಾವಣ–ಮಂಡೋದರಿಯರಲ್ಲಿ (ಕ್ರೌಂಚಮಿಥುನಾತ್) ಕಾಮ ಮೋಹಿತನಾದ ರಾವಣನನ್ನು ಕೊಂದೆಯೋ (ಅವಧೀಃ) ಆ ಕಾರಣದಿಂದ ನಿನಗೆ ಸರ್ವಕಾಲದಲ್ಲೂ (ಶಾಶ್ವತೀಃ ಸಮಾಃ) ಕೀರ್ತಿಯು ಉಂಟಾಯಿತು” (ಪ್ರತಿಷ್ಠಾಮ್ ಅಗಮಃ).

ಎರಡು ಕ್ರೌಂಚಪಕ್ಷಿಗಳು ಪರಸ್ಪರ ಆಡುತ್ತಿರುವಾಗ ಬೇಡನೊಬ್ಬ ಬಾಣಬಿಟ್ಟು ಗಂಡುಪಕ್ಷಿಯನ್ನು ಕೊಂದಾಗ, ಹೆಣ್ಣುಪಕ್ಷಿ ವಿಲಪಿಸುತ್ತಾ ಹಾರಾಡುತ್ತದೆ. ಈ ದೃಶ್ಯವನ್ನು ಕಂಡ ವಾಲ್ಮೀಕಿಗಳ ಹೃದಯ ಕರಗಿ, ಶಾಪದ ವಾಣಿಯು ಅಪ್ರಯತ್ನವಾಗಿ ಹೊರಹೊಮ್ಮುತ್ತದೆ. ಆದರೆ ಅದು ಶಾಪದ ಮಾತಾಗದೇ ಸರಸ್ವತಿಯ ಕೃಪೆಯಿಂದಲೇ ಹೊರಹೊಮ್ಮಿದ ರಾಮಾಯಣದ ಮಂಗಳಶ್ಲೋಕವೇ ಆಗಿದೆಯೆಂಬುದು ಅರ್ಥಾನುಸಂಧಾನದಿಂದ ತಿಳಿಯುತ್ತದೆ.

ಹಾಗೆಯೇ ಕೈಕೇಯಿಯ ದಾಸಿಯಾದ ಮಂಥರೆಯ ನಾಲಿಗೆಯಲ್ಲಿ ನಿಂತು ರಾಮನಿಗೆ ವನವಾಸವೂ, ಭರತನಿಗೆ ಪಟ್ಟಾಭಿಷೇಕವೂ ಆಗುವಂತೆ ಮಾಡಿದವಳೂ ಸರಸ್ವತಿಯೇ, ರಾಮನು ವನವಾಸಕ್ಕೆ ತೆರಳಿದ್ದರಿಂದಲೇ ರಾವಣಾದಿ ಸಕಲರಕ್ಕಸರ ಸಂಹಾರ ಹಾಗೂ ಶಾಪಗ್ರಸ್ತರಾಗಿದ್ದ ಅನೇಕರ ಉದ್ಧಾರವೂ ಆಯಿತು. ತಾಮಸಗುಣವು ಅಳಿದು, ಸಾತ್ತ್ವಿಕಗುಣವು ವಿಜೃಂಭಿಸಲು ಸರಸ್ವತಿಯ ಕೃಪೆಯು ಬೇಕು.

ದಂಡೀ ಎಂಬ ಆಲಂಕಾರಿಕನ ಈ ಮಾತು ಸರಸ್ವತಿಯ ಸೂಕ್ಷ್ಮಸ್ವರೂಪದ ಉಪಾಸನೆಯ ಮಹತ್ತ್ವವನ್ನು ಸಾರುತ್ತದೆ.

**ಇದಮಂಧತಮಃ ಕೃತ್ಸ್ನಂ ಜಾಯೇತ ಭುವನತ್ರಯಮ್ ।**
**ಯದಿ ಶಬ್ದಾಹ್ವಯಂ ಜ್ಯೋತಿಃ ಆಸಂಸಾರಂ ನ ದೀಪ್ಯತೇ ॥**

“ಸರಸ್ವತಿಯ ರೂಪವಾದ ಶಬ್ದವೆಂಬ ಜ್ಯೋತಿಯು ಜಗತ್ತನ್ನು ಬೆಳಗದೇ ಇದ್ದಲ್ಲಿ, ಈ ಮೂರೂ ಲೋಕಗಳೂ ಅಂಧಕಾರದಲ್ಲಿ (ಅಜ್ಞಾನದಲ್ಲಿ) ಮುಳುಗಿಹೋಗುತ್ತಿದ್ದವು”.

**ಸರಸ್ವತೀದೇವಿಯ ಸ್ಥೂಲ – ಸೂಕ್ಷ್ಮ – ರೂಪಗಳ ಗುಣಚಿಂತನೆ :**

ಆಶ್ವಯುಜಮಾಸದ ಶರದೃತುವಿನಲ್ಲಿ ಬರುವ ಮೂಲಾನಕ್ಷತ್ರದ ದಿನ ಭಾರತದಾದ್ಯಂತ ಸರಸ್ವತೀಪೂಜೆಯು ವೈಭವದಿಂದ ನಡೆಯುತ್ತದೆ. ಸಂಪ್ರದಾಯಸ್ಥರ ಮನೆಗಳಲ್ಲಿ ಮಕ್ಕಳೂ, ಹಿರಿಯರೂ, ಪುಸ್ತಕಗಳನ್ನು ಜೋಡಿಸಿಟ್ಟು ಪ್ರಾರ್ಥಿಸಿ, ಪೂಜಿಸುವ ಪರಿಪಾಟ ಇಂದಿಗೂ ಪ್ರಚಲಿತವಾಗಿದೆ. ಸಾರ್ವಜನಿಕವಾಗಿ ಶಾರದೆಯ ಸುಂದರವಾದ ಮೃಣ್ಮಯ ವಿಗ್ರಹಗಳ ಸ್ಥಾಪನೆ, ವಿಸರ್ಜನೆ, ಸಂಗೀತ–ವೀಣಾವಾದನಗಳ ಮೂಲಕ ನಾದರೂಪಳಾದ ಅವಳ ಆರಾಧನೆ, ಉಪನ್ಯಾಸ, ಗಮಕವಾಚನಗಳ ಮೂಲಕ ಜ್ಞಾನಸ್ವರೂಪಿಣಿಯ ಉಪಾಸನೆಯು ಇಂದಿಗೂ ನಡೆಯುತ್ತಿದೆ.

**ಡಾ. ವಾಗೀಶ್ವರೀ ಶಿವರಾಮ**
**ಕಾವೂರು, ಮಂಗಳೂರು ✆ : 9986200736**

**ರಾಮಾ ಅಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು

**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

ಓಂ

|| ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಾ ||

## ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ

ಬಳ್ಪ, ದಕ್ಷಿಣ ಕನ್ನಡ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ
ಶ್ರೀಮದ್ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ
ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ ಮತ್ತು
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ
**ಸ್ವಸ್ತಿ। ಶ್ರೀ ಶೋಭಕೃತ್ ಸಂವತ್ಸರದ ಆಶ್ವಯುಜ ಶುಕ್ಲಪಕ್ಷ ೧**
**ದಿನಾಂಕ 15-10-2023ನೇ ರವಿವಾರದಿಂದ**
**ದಿನಾಂಕ 24-10-2023ನೇ ಮಂಗಳವಾರ ಪರ್ಯಂತ**
ಶ್ರೀ ಕ್ಷೇತ್ರದ ತಂತ್ರಿಗಳಾದ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ
ನೇತೃತ್ವದಲ್ಲಿ

## ಮಹಾನವರಾತ್ರಿ ಉತ್ಸವಗಳು

**ಜರಗಲಿರುವುದು. ಆ ಪ್ರಯುಕ್ತ ತಾವೆಲ್ಲರೂ ಬಂದು ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.**

## ಸುಭಾಷಿತಗಳು

ಲಕ್ಷ್ಮೀರ್ವಸತಿ ಜಿಹ್ವಾಗ್ರೇ ಜಿಹ್ವಾಗ್ರೇ ಮಿತ್ರಬಾಂಧವಾಃ ।
ಜಿಹ್ವಾಗ್ರೇ ಬಂಧನಪ್ರಾಪ್ತಿಃ ಜಿಹ್ವಾಗ್ರೇ ಮರಣಂ ಧ್ರುವಮ್ ॥

ನಮ್ಮ ನಾಲಗೆಯ ಕಾರಣದಿಂದಲೇ ಸಂಪತ್ತು ಬರುತ್ತದೆ. ಬಂಧು-ಮಿತ್ರರು ನಮ್ಮೊಡನೆ ಇರುತ್ತಾರೆ. ಬಂಧನವೂ ಆಗುತ್ತದೆ. ಮರಣವೂ ಕೂಡ ಸಂಭವಿಸಬಹುದು. ಆದ್ದರಿಂದ ನಾವು ಯಾವಾಗಲೂ ಒಳ್ಳೆಯ ಮಾತನ್ನೇ ಆಡಬೇಕು.

---

ನಕ್ರಃ ಸ್ವಸ್ಥಾನಮಾಸಾದ್ಯ ಗಜೇಂದ್ರಮಪಿ ಕರ್ಷತಿ ।
ಸ ಏವ ಪ್ರಚ್ಯುತಃ ಸ್ಥಾನಾತ್ ಶುನಾಪಿ ಪರಿಭೂಯತೇ ॥

ಮೊಸಳೆ ತನ್ನ ಸ್ಥಾನವಾದ ನೀರಿನಲ್ಲಿದ್ದಾಗ ಗಜರಾಜನನ್ನೂ ಒಳಗೆಳೆಯಬಲ್ಲದು. ಅದೇ ಸ್ಥಾನದಿಂದ ಹೊರಗೆ ಬಂದರೆ ಒಂದು ನಾಯಿಯೂ ಅದನ್ನು ಸೋಲಿಸಬಲ್ಲದು.

---

ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್ ।
ಯಂ ಹಿ ರಕ್ಷಿತುಮಿಚ್ಛಂತಿ ಸದ್ಬುಧ್ಯಾ ಯೋಜಯಂತಿ ತಮ್ ॥

ದನಗಾಹಿಗಳಂತೆ ದೇವತೆಗಳು ಕೈಯಲ್ಲಿ ಕೋಲನ್ನು ಹಿಡಿದು ಜನರನ್ನು ಕಾಪಾಡುವುದಿಲ್ಲ. ಯಾರನ್ನು ಕಾಪಾಡಲು ಅಪೇಕ್ಷಿಸುವರೋ ಅವರಿಗೆ ಒಳ್ಳೆಯ ಬುದ್ಧಿಯನ್ನು ಅನುಗ್ರಹಿಸುತ್ತಾರೆ.

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE

*We undertake all types of Electrical, Plumbing and Sanitary works*

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001


ಪತ್ರಿಕೆಗೆ ಶುಭ ಬಯಸುವ-
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ-
**ಶ್ರೀ ಕಾಂತಾವರ ಜಯಪ್ರಕಾಶ್ ಮತ್ತು ಶ್ರೀಲತಾ ಹಾಗೂ ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ-
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು


**PREETHIKA AUTOMOBILES**
2493633
9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
KARANGALPADY, MANGALORE - 575 003
*Dealers in :*
Minda Switches, M. K. Products, Swiss Auto Products, Power Coils


Prop. : SUDHAKAR BELLE
: 9845193103/ 9481563103
**KARAN DIGITAL STUDIO**
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available



ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಬಳಿಯ ನಿವಾಸಿ ಶ್ರೀಮತಿ ಇಂದಿರಾ ಮೋಹನ್ ರಾವ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **25,000/-** ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಉಪಾಧ್ಯಕ್ಷ ಡಾ ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್, CA ನಾಗರಾಜ್ ಶರ್ಮ ಉಪಸ್ಥಿತರಿದ್ದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್



Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur
*Printed at :* Rajesh Power Press, Darbe - 574 202, Puttur, D. K.